ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಸೋಮವಾರ, ದಿನಾಂಕ : 28 ನೇ ಸೆಪ್ಟೆಂಬರ್, 2020

ರಾಜ್ಯದಲ್ಲಿ ಕುಮ್ಕಿ ಜಮೀನನ್ನು ರೈತರಿಗೆ ನೀಡುವ ಮೂಲಕ ಅರಣ್ಯವೃದ್ಧಿ ಮತ್ತು ಸಂರಕ್ಷಣೆ ಕುರಿತು

ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶನ ಹೊಂದಿದವರು):-

799 (991) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕೃಷಿ ಭೂಮಿಯ ಮಂಜೂರಾತಿಗಾಗಿ ಅಕ್ರಮ ಸಕ್ರಮ ಯೋಜನೆಯ ನಮೂನೆ 53ರಲ್ಲಿ ಮತ್ತು ಮನೆ ನಿವೇಶನ ಮಂಜೂರಾತಿಯ 94ಸಿ ರಡಿ ಸಲ್ಲಿಸಿದ ಅರ್ಜಿಗಳಲ್ಲಿ ಇಲಾಖೆಯ ನಿರಾಕ್ಷೇಪಣೆಯನ್ನು ಪಡೆಯಲು ಯಾವ ಕಛೇರಿಗೆ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತದೆ ;

(ಆ) ಮಾರಾಟಕ್ಕೆ ಮತ್ತು ಪರಿವರ್ತನೆಗೆ ಅವಕಾಶವನ್ನು ನೀಡದೇ ಕುಮ್ಕಿ, ಕಾಣೆ ಬಾಣೆ, ಜಮ್ಮಾ, ಸೊಪ್ಪಿನ ಬೆಟ್ಟ ದಂತಹ ಭೂಮಿಯನ್ನು ಅದರ ಸೊಪ್ಪು, ಒಣಕಟ್ಟಿಗೆ, ತರಗೆಲೆಗಳನ್ನು ತಮ್ಮ ಕೃಷಿ ಚಟುವಟಿಕೆಗೆ ಬಳಸುತ್ತಿರುವ ಅಲ್ಲಿಯ ರೈತರಿಗೆ ಅವರ ಹಕ್ಕು (Privilege) ಕಾಯ್ದು ಕೊಂಡು ಹೋಗಲು ಪಹಣಿಯಲ್ಲಿ ಕಾಡು ಎಂದು ದಾಖಲಿಸಿ ಸರ್ಕಾರದ ಮಾರ್ಗಸೂಚಿ ಬೆಲೆಯ ಅರ್ಧಕ್ಕಿಂತಲೂ ಕಡಿಮೆ ದರದಲ್ಲಿ ರೈತರಿಗೆ ನೀಡುವ ಯೋಜನೆ ಸರ್ಕಾರದ ಮುಂದಿದೆಯೇ ;

(ಇ) ಇಲ್ಲವಾದಲ್ಲಿ ರಾಜ್ಯದಲ್ಲಿಯೇ ಅತೀ ಹೆಚ್ಚು ಅರಣ್ಯದಂತಿರುವ ಪ್ರದೇಶವನ್ನು ಹೊಂದಿರುವ ಹಾಗೂ ರೈತರು ತಮ್ಮ ಹಕ್ಕು (Privilege) ಕಾಯ್ದು ಕೊಂಡು ಬಂದಿರುವ ಭೂಮಿಯಲ್ಲಿನ ಮರಗಳನ್ನು ರಕ್ಷಿಸಲು ಮತ್ತು ವೃದ್ಧಿಪಡಿಸಲು ಸರ್ಕಾರದ ಕ್ರಮವೇನು?